ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 18 ಎಲ್‌ಎಂಡಬ್ಲ್ಯೂ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23-02-2017.

## ತಿದ್ದುಪಡಿ

ಕರ್ನಾಟಕ ಸರ್ಕಾರವು ಹೋಟೆಲ್ ಅನುಸೂಚಿತ ಉದ್ದಿಮೆಗೆ ಅನ್ವಯಿಸುವಂತೆ ಕನಿಷ್ಠ ವೇತನದ ಅಂತಿಮ ಅಧಿಸೂಚನೆ ಸಂಖ್ಯೆ: ಕಾಇ 18 ಎಲ್‌ಎಂಡಬ್ಲ್ಯೂ 2015ನ್ನು ದಿನಾಂಕ:16-9-2016ರಂದು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:6-10-2016ರಂದು ಪ್ರಕಟಿಸಿ, ಅದರಲ್ಲಿ ಒಟ್ಟು ಹನ್ನೆರಡು (12) ಷರತ್ತುಗಳನ್ನು ವಿಧಿಸಲಾಗಿತ್ತು. ಈಗ ಕರ್ನಾಟಕ ಸರ್ಕಾರವು ಸದರಿ ಹನ್ನೆರಡು (12) ಷರತ್ತುಗಳೊಂದಿಗೆ ಕೆಳಕಂಡ ಹದಿಮೂರನೇ (13ನೇ) ಷರತ್ತನ್ನು ಸೇರ್ಪಡಿಸುವ ಉದ್ದೇಶದಿಂದ ಈ ಕರಡು ತಿದ್ದುಪಡಿಯನ್ನು ಸಾರ್ವಜನಿಕರ, ಉದ್ಯೋಗಿಗಳ, ಉದ್ಯೋಗದಾತರ/ಬಾಧಿತ ವ್ಯಕ್ತಿಗಳ ಗಮನಕ್ಕೆ ಪ್ರಕಟಿಸಿರುತ್ತದೆ.

**13. ಯಾವುದಾದರೂ "ಹೋಟೆಲ್" ಉದ್ದಿಮೆಯಲ್ಲಿ ಕಾರ್ಮಿಕರಿಗೆ ಆಹಾರವನ್ನು ವೇತನದ ಭಾಗವಾಗಿ ಒದಗಿಸುತ್ತಿದ್ದಲ್ಲಿ, ಅಂತಹ ಕಾರ್ಮಿಕರ ಸಂಬಳದಿಂದ ಆಯಾ ವಲಯಗಳಿಗೆ ನಿಗಧಿತವಾದ ಕನಿಷ್ಠ ವೇತನದಲ್ಲಿ ಯಾವುದು ಅತ್ಯಂತ ಕಡಿಮೆಯೋ ಅದರಲ್ಲಿ ಶೇಕಡ ಹದಿನೈದು (15) ರಷ್ಟು ಕಡಿತವನ್ನು ಮಾಡಬಹುದಾಗಿದೆ.**

ಈ "ತಿದ್ದುಪಡಿ" ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಎರಡು (2) ತಿಂಗಳ ಅವಧಿಯೊಳಗೆ ಬಾಧಿತರಾಗುವ ಸಾರ್ವಜನಿಕರಿಂದ/ ಉದ್ಯೋಗಿಗಳಿಂದ/ ಉದ್ಯೋಗದಾತರಿಂದ/ ಸಂಘ ಸಂಸ್ಥೆಗಳಿಂದ / ವ್ಯಕ್ತಿಗಳಿಂದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸರ್ಕಾರವು ಸ್ವೀಕರಿಸುತ್ತದೆ. ತದನಂತರ ಬಂದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಸಂಬಂಧಿಸಿದವರು ಸಲ್ಲಿಸುವ ಸಲಹೆಗಳು ಹಾಗೂ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು, **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸಸೌಧ, ಬೆಂಗಳೂರು-560 001,** ಇವರಿಗೆ ಅಥವಾ **ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029,** ಇವರಿಗೆ ಸಲ್ಲಿಸಲು ಈ ಮೂಲಕ ಸರ್ಕಾರವು ಅವಕಾಶವನ್ನು ಕಲ್ಪಿಸಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

A.N. Radhamani 23/2/20

[ಎ.ಎನ್.ರಾಧಾಮಣಿ]
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಸರ್ಕಾರದ ಈ ತಿದ್ದುಪಡಿ ಆದೇಶವನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 500 ಪ್ರತಿಗಳನ್ನು ಪೀಠಾಧಿಕಾರಿ-2, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

**ಪ್ರತಿಗಳು:-**

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.

...2

Scanned by CamScanner